**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**LAC**-2/2022 **PW**: 1

**ದಿಃ 21.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರ ಪರ ಶ್ರೀ ಎಸ್ ಎಸ್ ಎಚ್ ವಕೀಲರಿಂದ**

ಈಗಾಗಲೇ ಭೂಸ್ವಾದೀನಗೊಂಡ ಸರ್ವೆ ನಂಃ720/ಅ/2 ಕ್ಷೇತ್ರ 2 ಎಕರೆ 6 ಗುಂಟೆ ಜಮೀನಿಗೆ ಮತ್ತೇ ಯಾರು ಮಾಲೀಕರು ಇರುತ್ತಾರೆಂದರೆ ಸಾಕ್ಷಿ ನಾನು ಮತ್ತು ನನ್ನ ಮಗ ಇಬ್ಬರೇ ಎನ್ನುತ್ತಾರೆ. ಸದರಿ ಜಾಗಾವು ನಿಮಗೆ ಹೇಗೆ ಬಂದಿತು ಎಂದರೆ ಸಾಕ್ಷಿ ನಮ್ಮ ಮನೆಯವರಿಂದ ನಮಗೆ ಬಂದಿರುತ್ತದೆ ಎನ್ನುತ್ತಾರೆ. ಸದರಿ 2 ಎಕರೆ 6 ಗುಂಟೆ ಕ್ಷೇತ್ರವನ್ನು ಸ್ವಾದೀನಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಸದರಿ ಸ್ವಾದೀನವನ್ನು 2007 ರಲ್ಲಿ ಮಾಡಿಕೊಳ್ಳಲಾಗಿದೆ ಎಂದರೆ ಸರಿ. ಸದರಿ ಹೊಲದಲ್ಲಿ ಎನು ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಗೇಣಿಗೆ ಕೊಟ್ಟಿದ್ದೆವು ಎನ್ನುತ್ತಾರೆ. ಗೇಣಿಗೆ ಕೊಟ್ಟವರು ಏನು ಬೆಳೆಯುತ್ತಿದ್ದರೆಂದು ನನಗೆ ಗೊತ್ತಿಲ್ಲ. ಸದರಿಯವರು ಬೆಳೆದ ಕಾಳುಗಳನ್ನು ನಮಗೆ ಕೊಡುತ್ತಿದ್ದರು. ಎಷ್ಟು ಕೊಡುತ್ತಿದ್ದರು ಎಂದರೆ ಸಾಕ್ಷಿ ಹಣ ತೆಗೆದುಕೊಳ್ಳುತ್ತಿರಲಿಲ್ಲ ಬೆಳೆದ ಕಾಳುಗಳನ್ನು ಅವರೇ ಕೊಡುತ್ತಿದ್ದರು ಎನ್ನುತ್ತಾರೆ. ಅದರಿಂದ ನನಗೆ ಇಂತಿಷ್ಟು ಆದಾಯ ಬರುತ್ತಿತ್ತು ಎಂದು ಹೇಳಲು ಆಗುವದಿಲ್ಲ ಎಂದರೆ ಸರಿ. 2007 ನೇ ಸಾಲಿನ ಮಾರುಕಟ್ಟೆ ಮೌಲ್ಯವನ್ನು ಹಿಡಿದು ಆಗಿನ ಸ್ವಾದೀನಾದಿಕಾರಿಗಳು ಬೆಲೆ ನಿಗದಿ ಮಾಡಿರುತ್ತಾರೆಂದರೆ ಸಾಕ್ಷಿ ಆಗ ಸ್ವಲ್ಪವೇ ಇತ್ತು ಎನ್ನುತ್ತಾರೆ. ನಿಪಿ 3 ನ್ನು ನಮಗೆ ಕೊಟ್ಟಿದ್ದು ದಿನಾಂಕಃ20.02.2024 ರಂದು ಎಂದರೆ ಸರಿ. 2007 ರ ಇಸ್ವಿ ಬಗ್ಗೆ ಸದರಿ ದಾಖಲೆಯಲ್ಲಿ ಏನೇನ್ನು ನಮೂದು ಮಾಡಿಲ್ಲ ಎಂದರೆ ಹೌದು ಎನ್ನುತ್ತಾರೆ. ಆದ್ದರಿಂದ ನಮ್ಮ ಜಮೀನುಗಳಿಗೆ ಮತ್ತು ಫಲವತ್ತತೆ ಬಗ್ಗೆ ಈ ದಾಖಲೆಯನ್ನು ಪರಿಗಣಿಸಲು ಬರುವದಿಲ್ಲ ಎಂದರೆ ಸಾಕ್ಷಿ ಹೌದಾ ಎನ್ನುತ್ತಾರೆ. ನಿಪಿ 4 ಗಣೇಶ ಲೇಔಟ ಗೋಕುಲ ರೋಡ ಆಗಿದ್ದು ಸದರಿ ದಾಖಲೆ ಎನ್ ಎ ಪ್ಲಾಟಗೆ ಸಂಬಂದಿಸಿದ ದಾಖಲೆಯಾಗಿದ್ದು ಈ ದಾಖಲೆಯನ್ನು ನಮ್ಮ ಜಮೀನಿಗೆ ಹೋಲಿಕೆ ಮಾಡಲು ಬರುವದಿಲ್ಲ ಎಂದರೆ ಸಾಕ್ಷಿ ನನಗೆ ಹೇಳಲು ಆಗುವದಿಲ್ಲ ಎನ್ನುತ್ತಾರೆ. ನಿಪಿ 5 ಕೂಡಾ ಎನ್ ಎ ಬಿನ್ ಶೇತ್ಕಿ ಹಾಗೂ ಕೃಷ್ಣಾಪೂರ ಗ್ರಾಮದ 2006 ನೇ ಸಾಲಿನದಾಗಿದ್ದು ಈ ದಾಖಲೆಯನ್ನು ಕೂಡಾ ನನ್ನ ಕೇಸಗೆ ಹೋಲಿಸಲು ಬರುವದಿಲ್ಲ ಎಂದರೆ ಸಾಕ್ಷಿ ಕೃಷ್ಣಾಪೂರ ಗೋಕುಲ ರೋಡ

ಎಲ್ಲವೂ ಒಂದೇ ಇದೆ ಎಂದು ನುಡಿಯುತ್ತಾರೆ. ನಿಪಿ 6 ಎಂದು ಹಾಜರುಪಡಿಸಿರುವ ದಾಖಲೆ ರಸ್ತೆಗಾಗಿ ಸ್ವಾದೀನಪಡಿಸಿಕೊಂಡ ಜಾಗಾದ ದಾಖಲೆಯಾಗಿದ್ದು ಈ ದಾಖಲೆಯ ಆದೇಶವನ್ನು ನನ್ನ ಕೇಸಗೆ ಹೋಲಿಸಲು ಬರುವದಿಲ್ಲ ಎಂದರೆ ಸರಿಯಲ್ಲ ಹಾಗೂ ಸದರಿ ಆಸ್ತಿಯನ್ನು ಪಿ ಡಬ್ಲು ಡಿ ಇಲಾಖೆಯವರು ಸ್ವಾದೀನಪಡಿಸಿಕೊಂಡಿದ್ದರಿಂದ ನಮ್ಮ ಕೇಸಗೆ ಇದು ಹೊಂದಾಣಿಕೆ ಆಗುವದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಸದರಿ ಆಸ್ತಿ ಅಬಿವೃದ್ಧಿಯಾಗಿರುವದು ಇತ್ತೀಚೆಗೆ ಹೊರತು 2007 ನೇ ಸಾಲಿನಲ್ಲಿ ಅಲ್ಲ ಎಂದರೆ ಸರಿ. ನಮ್ಮ ಆಸ್ತಿಗೆ ಈಗಾಗಲೇ ನೀಡಿರುವ ಪರಿಹಾರವು ಸರಿಯಾಗಿದ್ದು ಹೆಚ್ಚಿಗೆ ಕೊಡುವ ಅವಶ್ಯಕತೆ ಇರುವದಿಲ್ಲ ಆದಕಾರಣ ಹೆಚ್ಚಿನ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**